ಹಲ್ಲುಗಳು. ಅವಳ ಕಡೆಯಿಂದ ಗಂಧದ ವಾಸನೆ.

'ನೀನು ತುಂಬಾ ಸುಂದರವಾಗಿರುವೆ, ಎಲ್ಲಿಂದ ಬಂದೆ' ಕೇಳುತ್ತಾನೆ.

'ಆಕಾಶದಿಂದ' ನಗುತ್ತಾಳೆ ಕಿನ್ನರಿಯಂತೆ.

'ಅಂದರೆ ನೀನು ಮಿನುಗುವ ತಾರೆಯಾ...?' ಮೈಮರೆತವನಂತೆ ಕೇಳುತ್ತಾನೆ.

'ಅರೆ, ಶೇಟ್ ಈ ಮುಂಬಯಿಯಲ್ಲಿ ನನ್ನಂಥವರು ರಸ್ತೆಗೆ ಹತ್ತಾರು ಜನ ಬಿದ್ದಿದ್ದೇವೆ. ನೀನೆಂಥ ಮುಂಬೈಕರ್' ಅವಳು ಸ್ವಲ್ಪ ಛೇಡಿಸಿದಂತೆ ಮಾತನಾಡುತ್ತಾಳೆ. ಅವನಿಗೆ ಬೇಸರವೇನೂ ಆಗುವುದಿಲ್ಲ.

'ನಾನು ನಿನ್ನೊಂದಿಗೆ ಡ್ಯಾನ್ಸ್ ಮಾಡುತ್ತೇನೆ...' ಅವಳ ಕೈ ಹಿಡಿದು ಕೇಳುತ್ತಾನೆ. ಮತ್ತೆ ಶಿಳ್ಳೆಗಳು, ಚಪ್ಪಾಳೆಗಳು, ಜೋರು ನಗು.

'ಕಮಾನ್ ಸೋನಾ, ಕಮಾನ್ ಸೋನಾ...' ಹುರಿದುಂಬಿಸುವ ಧ್ವನಿಗಳು.

ಅವಳು ಸೋನಾಲಾಲನ ಕೈ ಕೊಡವಿಕೊಂಡು 'ನಾನು ನಿನ್ನೊಂದಿಗೆ ಡ್ಯಾನ್ಸ್ ಮಾಡಲಾರೆ' ಎನ್ನುತ್ತಾಳೆ.

'ಏಕೆ?' ಕೇಳುತ್ತಾನೆ ಬೇಸರದಿಂದ. ಹುಡುಗಿ ನಕ್ಕು ಕೇಳುತ್ತಾಳೆ:

'ನಿನಗೆ ಕಾಮನಬಿಲ್ಲು ಗೊತ್ತಾ...'

'ಓಹ್ ಗೊತ್ತು, ನನ್ನ ಮನೆಯ ಮಹಡಿಯಲ್ಲಿ ನಿಂತು ಎಷ್ಟೊಂದು ಸಾರಿ ನೋಡಿದ್ದೇನೆ, ಇಡೀ ಮುಂಬಯಿಯನ್ನು ತಬ್ಬಿಕೊಂಡ ಕಾಮನಬಿಲ್ಲನ್ನು...' ಸತ್ಯವನ್ನೇ ಹೇಳುತ್ತಾನೆ.

'ಅಂಥ ಒಂದು ಕಾಮನಬಿಲ್ಲು ನನಗೆ ಬೇಕು. ತಂದುಕೊಟ್ಟರೆ ನಿನ್ನೊಂದಿಗೆ ಆಡುತ್ತೇನೆ ನೃತ್ಯ, ಇಲ್ಲವೆಂದರೆ ನೀನು ನನಗೆ ಅಪಥ್ಯ...' ಅವಳು ಕಾವ್ಯಮಯವಾಗಿ ಹೇಳುತ್ತಾಳೆ.

'ನೀನು ತಮಾಷೆ ಮಾಡಬೇಡ. ಕಾಮನಬಿಲ್ಲನ್ನು ಹಿಡಿಯಲಾಗುವುದಿಲ್ಲ' ತಕ್ಷಣ ಹೇಳುತ್ತಾನೆ ಸೋನಾಲಾಲ್, ಬುದ್ಧಿವಂತ ಹುಡುಗ.

'ಹಾಗಾದರೆ ಒಂದು ಕೆಲಸ ಮಾಡು, ಕಾಮನಬಿಲ್ಲಿನ ಎಲ್ಲಾ ಬಣ್ಣಗಳುಳ್ಳ ಒಂದು ಗುಲಾಬಿ ಹೂವನ್ನು ಹಿಡಿದು ತಾ. ಆಗ ನಿನ್ನೊಂದಿಗೆ ಡ್ಯಾನ್ಸ್ ಮಾಡುತ್ತೇನೆ' ಎನ್ನುತ್ತಾಳೆ ಅವಳು.

'ತರುತ್ತೇನೆ ಖಂಡಿತಾ. ನನ್ನನ್ನು ಏನೆಂದು ತಿಳಿದಿರುವೆ. ಮಫತ್ಲಾಲ್ ಗುನ್ನಾಲಾಲನ ಮೊಮ್ಮಗ ನಾನು. ಒನ್ ಆಫ್ ದಿ ರಿಚ್ಚೆಸ್ಟ್ ಪರ್ಸನ್ ಇನ್ ಮುಂಬಯ್. ಏನು ನಿನ್ನ ಹೆಸರು?' ಅವನಲ್ಲಿ ಸ್ವಾಭಿಮಾನ ಮೂಡುತ್ತದೆ. ಅವಳು ನಗುತ್ತಾಳೆ ಸುಮ್ಮನೆ ನೋಡುತ್ತಾ ಸೋನಾಲಾಲನ ಮುಖವನ್ನೇ.

'ಏನು ನಿನ್ನ ಹೆಸರು? ಎಲ್ಲಿರುತ್ತೀಯ? ಗುಲಾಬಿಯನ್ನು ಹಿಡಿದು ಎಲ್ಲಿ ಬರಬೇಕು?' ಪ್ರಶ್ನೆಗಳ ಸುರಿಮಳೆಗೈಯುತ್ತಾನೆ.

'ನನ್ನ ಹೆಸರು ಊರ್ಮಿಳಾ. ಗುಲಾಬಿ ಹಿಡಿದು ಗೇಟ್ ವೇ ಆಫ್ ಇಂಡಿಯಾ ಬಳಿ ಬಂದು ಕೂಗಿದರೆ ತಕ್ಷಣ ನಿನ್ನ ಮುಂದೆ ಪ್ರತ್ಯಕ್ಷವಾಗುತ್ತೇನೆ. **until then good bye...**' ಎಂದು ಹೇಳಿ ಅವಳು ಸ್ಟೇಜ್ ಇಳಿದು ಜನರ ಗುಂಪಿನಲ್ಲಿ ಮಾಯವಾಗುತ್ತಾಳೆ.

ಊರ್ಮಿಳಾ ಹೋದ ದಾರಿಯನ್ನೇ ನೋಡುತ್ತಾ ನಿಂತಿದ್ದ ಸೋನಾಲಾಲನ ಬಳಿ ಬಂದು ತಾತ ಮಫತ್ಲಾಲ್ ಗುನ್ನಾಲಾಲ್ ತಲೆ ನೇವರಿಸುತ್ತಾನೆ. ತಾತನ ಭುಜಕ್ಕೊರಗಿ ಸೋನಾಲಾಲ್ ಬಿಕ್ಕಳಿಸುತ್ತಾನೆ. 'ನಿನಗೆ ಬೇಕಾಗಿರೋದು ಕಾಮನಬಿಲ್ಲಿನ ಗುಲಾಬಿ ಅಷ್ಟೇ ಅಲ್ವಾ ಸೋನಾ. ಚಿಂತೆ ಬಿಡು, ಇನ್ನೊಂದು ವಾರದಲ್ಲಿ ಅಂಥ ಒಂದು ಗುಲಾಬಿ ನಿನ್ನ ಕೈಯಲ್ಲಿ ಇಡ್ತೀನಿ. ಅದನ್ನು ನೋಡಿ ಬದಲೇಳದೆ ಅವಳು ನಿನ್ನ ಜೊತೆಯಲ್ಲಿ ಡ್ಯಾನ್ಸ್ ಮಾಡದಿದ್ದರೆ ಕೇಳು' ಎಂದು ಮಫತ್ಲಾಲ್ ಗುನ್ನಾಲಾಲ್ ಮೊಮ್ಮಗನನ್ನು ಸಮಾಧಾನಪಡಿಸುತ್ತಾನೆ. ತಾತನ ಮಾತುಗಳ ಮೇಲೆ ಸೋನಾಗೆ ಅಪಾರವಾದ ನಂಬಿಕೆ. ಮಫತ್ಲಾಲ್ ಗುನ್ನಾಲಾಲ್ ಮಾರನೆಯ ದಿನ ಸಂಜೆ ಗ್ರಾಂಟ್ ರೋಡಿಗೆ ಇಳಿಯುತ್ತಾನೆ. ಗ್ರಾಂಟ್ ರೋಡಿನ ಫುಟ್‌ಪಾತ್ ಅಂಗಡಿಗಳು ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರ ಎದೆಗಳಲ್ಲಿ ಕಚಗುಳಿಯನ್ನು ಎಬ್ಬಿಸುತ್ತವೆ. ಅಲ್ಲದೆ ಶ್ರೀಮಂತರಿಗೆ ಬೇಕಾಗುವ **antique** ವಸ್ತುಗಳು ಇಲ್ಲಿ ರಾಶಿ ರಾಶಿ ಸಿಗುತ್ತವೆ. ಗ್ರಾಂಟ್ ರೋಡ್ ಎಲ್ಲಾ ನಮೂನೆಯ ಜನರಿಂದ ಸದಾ ಗಿಜಿಗುಟ್ಟುತ್ತಿರುತ್ತದೆ. ಮುಂಬಯಿಯಲ್ಲಿ ಹೆಚ್ಚಿನ ಸಿನಿಮಾಗಳು ತೆರೆಕಾಣುವುದು ಗ್ರಾಂಟ್ ರೋಡಿನಲ್ಲೇ. ಆದ್ದರಿಂದ ಈ ರೋಡಿನಲ್ಲಿ ಕನಸುಗಳ ಮಾರಾಟ ಮತ್ತು ಖರೀದಿ ಪ್ರತಿಕ್ಷಣ ಭರ್ಜರಿಯಾಗಿ ನಡೆಯುತ್ತಿರುತ್ತದೆ.

ಸಿಮ್ರೋಜ ಆರ್ಟ್ ಗ್ಯಾಲರಿಯ ಮುಂದೆ ನಿಂತವನನ್ನು ಒಳಗಡೆಯಿಂದ ಹೆಣ್ಣು ಧ್ವನಿಯೊಂದು 'ಒಳಗೆ ಬನ್ನಿ ಶೇಟ್, ಏನು ಬೇಕಿತ್ತು?' ಎಂದು ಮಧುರ ಧ್ವನಿಯಲ್ಲಿ ಸ್ವಾಗತಿಸಿತು. ಮಫತ್ಲಾಲ್ ಗುನ್ನಾಲಾಲ್ ಒಳಗೆ ಕಾಲಿಟ್ಟವನು ಅಂಗಡಿಯಲ್ಲಿದ್ದ ಪೇಂಟಿಂಗ್ಸ್‌ನ್ನು ನೋಡತೊಡಗಿದ. ಅವನೆಂದೂ ಇಂದಿನವರೆಗೆ ಪೇಂಟಿಂಗ್ ಅಂಗಡಿಯನ್ನು ಪ್ರವೇಶಿಸಿರಲಿಲ್ಲ. ಅಂಥ ಸಂದರ್ಭ ಅವನಿಗೆ ಒದಗಿ ಬಂದಿರಲಿಲ್ಲ ಕೂಡ. ಅದ್ಭುತವಾದ ಪೇಂಟಿಂಗ್‌ಗಳ ರಾಶಿಯಲ್ಲಿ ಮುಳುಗಿಹೋದಂತೆ ಭಾಸವಾಗಿತ್ತು ಅವನಿಗೆ.

'ಎಂಥ ಪೇಂಟಿಂಗ್ ಬೇಕು ಶೇಟ್‌ಜಿ? ಮೊನ್ನೆ ಅಮಿತಾಬ್ ಬಚ್ಚನ್ ಪಿಎ ಬಂದು ಹನ್ನೆರಡು ಲಕ್ಷದ ಪೇಂಟಿಂಗ್ ಖರೀದಿಸಿ ಹೋದ. ವಾರದ ಹಿಂದೆ ವಿರಾಟ್ ಕೊಹ್ಲಿಯ ಮ್ಯಾನೇಜರ್ ಹೊಸದಾಗಿ ಕಟ್ಟಿದ ಮನೆಗಾಗಿ ಒಂದು ಡಜನ್ ಪೇಂಟಿಂಗ್ ಕೊಂಡೊಯ್ದರು. ಅವರು ಮೂರು ತಿಂಗಳ ಹಿಂದೆಯೇ ಆರ್ಡರ್ ಕೊಟ್ಟು ಹೋಗಿದ್ದರು. ಅದರ ಅಮೌಂಟ್ ಹೇಳೋದು ಬೇಡ. ಜಸ್ಟ್ ಆರು ತಿಂಗಳ ಹಿಂದೆ ಖುದ್ದು ತೆಂಡೂಲ್ಕರ್ ಮಿಸೆಸ್ ಡಾಕ್ಟರ್ ಅಂಜಲಿ ಮೇಡಮ್ ಬಂದು ಅವರ ಹೋಟೆಲ್ ರೆಸಿಪ್ಷನ್ನಿನಲ್ಲಿ ಹಾಕಲು ಒಂದು ಸುಂದರವಾದ ಪೇಂಟಿಂಗ್ ಒಯ್ದರು'. ಆಕೆಯ ಮಾತುಗಳನ್ನು ಮಧ್ಯದಲ್ಲಿ ಮುರಿದ ಮಫತ್ಲಾಲ್ ಗುನ್ನಾಲಾಲ್ 'ನನ್ನ ಹೆಸರು ಮಫತ್ಲಾಲ್ ಗುನ್ನಾಲಾಲ್ ಅಂತ. ಅಮೌಂಟ್ ಬಗ್ಗೆ ನನ್ನ ತಕರಾರಿಲ್ಲ. ಕಾಮನಬಿಲ್ಲಿನ ಎಲ್ಲಾ ಬಣ್ಣಗಳನ್ನು ಹೊತ್ತ ಒಂದು ಗುಲಾಬಿ ಹೂ ಬೇಕು. ಆ! ಆ ಹುಡುಗಿ ಹೆಚ್ಚೂ ಕಡಿಮೆ ನಿನ್ನಂತೆಯೇ ಇದ್ದಳು. ಇದೇ ಕಣ್ಣು, ಇದೇ ನಗು' ಎಂದು ತನ್ನ ಮೊಮ್ಮಗನಿಗೆ ಪಾರ್ಟಿಯಲ್ಲಿ ಊರ್ಮಿಳಾ ಎಂಬ ಡ್ಯಾನ್ಸರ್ ಹುಡುಗಿ ಹೇಳಿದ ಮಾತುಗಳೊಂದಿಗೆ ನಡೆದ ಸಂಗತಿಯನ್ನೆಲ್ಲ ಹೇಳಿದ್ದ. ತನ್ನ ಸೀಟಿನಿಂದ ಚಕ್ಕನೆ ಕೆಳಗಿಳಿದು ಬಂದ ಹುಡುಗಿ ಮುಖದಲ್ಲಿ ಅಚ್ಚರಿಯನ್ನು ತುಂಬಿಕೊಂಡು 'ಓಹ್ ಶೇಟ್‌ಜಿ ದಯವಿಟ್ಟು ನನ್ನನ್ನು ಕ್ಷಮಿಸಿ. ನೀವು ನಮ್ಮ ಅಂಗಡಿಯ ಒಳಗೆ ಪ್ರವೇಶಿಸಿರುವುದು ನಮ್ಮ ಪುಣ್ಯವೇ ಸರಿ. ಆದರೆ ಶೇಟ್‌ಜಿ ನಿಮ್ಮ ಮೊಮ್ಮಗನಿಗೆ ಸವಾಲೆಸೆದಿರುವ ಸುಂದರಿಗೆ ಪೇಂಟಿಂಗ್‌ನಲ್ಲಿ ಸೃಷ್ಟಿಸಿರುವ ಗುಲಾಬಿ ಖಂಡಿತವಾಗಿಯೂ ಇಷ್ಟವಾಗುವುದಿಲ್ಲ. ಆ ನೃತ್ಯಗಾತಿಯನ್ನು ನನಗೆ ಬೇರೆ ಹೋಲಿಸಿದ್ದೀರಿ; ನನಗೇ ಪೇಂಟಿಂಗ್‌ನಲ್ಲಿ ಅರಳಿದ ಗುಲಾಬಿ ಇಷ್ಟವಾಗುವುದಿಲ್ಲ. ಅಂಥದ್ದರಲ್ಲಿ ಆ ಸುಂದರಾಂಗಿಗೆ? ಹೇಗೂ ದುಡ್ಡಿಗೆ ಲೆಕ್ಕವಿಲ್ಲದವರು ನೀವು. ಅವಳಿಗೇಕೆ ವಜ್ರಲೇಪಿತ ಚಿನ್ನದಲ್ಲಿ ಮಾಡಿದ ಕಾಮನಬಿಲ್ಲುಗಳ ಗುಲಾಬಿ ಕೊಡಬಾರದು? ಇದುವರೆಗೂ ಜಗತ್ತಿನಲ್ಲಿ ಯಾರೂ ಅಂಥ ಉಡುಗೊರೆಯನ್ನು ಕೊಟ್ಟಿರಲಾರರು. ಆ ಹುಡುಗಿ ಸಂಭ್ರಮದಲ್ಲಿ ತೇಲಿ ನಿಮ್ಮ ಹುಡುಗನ ತೋಳಲ್ಲಿ ಕರಗಿ ನೀರಾಗದಿದ್ದರೆ ಕೇಳಿ' ಎಂದಿದ್ದಳು. ಮಫತ್ಲಾಲ್ ಗುನ್ನಾಲಾಲ್ ಕ್ಷಣ ಸ್ತಂಭೀಭೂತನಾಗಿ ನಿಂತವನು–

'ಎಲಾ ಚತುರೆ, ಎಂಥಾ ಅದ್ಭುತ ಐಡಿಯಾ ನಿನ್ನದು. ನಾನು ರೆಡಿ, ಆದರೆ ಅಂಥ ಗುಲಾಬಿಯನ್ನು ತಯಾರು ಮಾಡುವವರು ಯಾರು ಈ ಮುಂಬಯಿಯಲ್ಲಿ?' ಎಂದು ಕಕ್ಕಾವಿಕ್ಕಿಯಾಗಿ ಕೇಳಿದ್ದ.

'ಅರೆ ಶೇಟ್‌ಜಿ, ವಿಕ್ರಮ್ ಜಯಂತಿ ಲಾಲ್ ಅಂಡ್ ಕಂಪನಿಯ ಹೆಸರು ಕೇಳಿಲ್ವಾ ಮುಂಬಯಿಯಲ್ಲಿ ನೀವು. ನಂಬರ್ ಒನ್ ಡೈಮಂಡ್ ತಯಾರಕರು ಅವರು. ವಜ್ರದ ಇರುವೆಯನ್ನು ಬೇಕಾದರೂ ಒಂದೇ ದಿನದಲ್ಲಿ ತಯಾರಿಸಿಕೊಡಬಲ್ಲಂಥ ನಿಪುಣರು' ಎಂದವಳ ಮಾತುಗಳನ್ನು ಕೇಳಿಸಿಕೊಂಡ ಗುನ್ನಾಲಾಲ್ 'ಓಹ್ ಮರೆತಿದ್ದೆ ನೋಡು, ಅವರು ನನಗೆ ದೂರದ ನೆಂಟರೇ ಆಗಬೇಕು. ನೀನು ಇಂಥ ಅಂಗಡಿಯೊಂದರ ಮಾಲಕಿಯಾಗಬೇಕಿತ್ತು. ಬದಲಾಗಿ ನೀನಿಲ್ಲಿ ಕೆಲಸಕ್ಕಿರುವುದು ನನಗೆ ಅಷ್ಟೇನೂ ಸರಿಕಾಣುತ್ತಿಲ್ಲ' ಎಂದು ಗುನ್ನಾಲಾಲ್ ಅಂಗಡಿಯಿಂದ ಹೊರಕ್ಕೆ ಕಾಲಿಟ್ಟಿದ್ದ. ಅಂಗಡಿಯ ಬಾಗಿಲಿನವರೆಗೂ ಬಂದ ಹುಡುಗಿ 'ಥ್ಯಾಂಕ್ಯೂ ಫಾರ್ ಯುವರ್ ಕಾಂಪ್ಲಿಮೆಂಟ್ಸ್ ಶೇಟ್‌ಜೀ, ಅಂದ ಹಾಗೆ ನಾನು ಈ ಅಂಗಡಿಯ ಮಾಲೀಕನ ಮಗನ ಲವರ್. ಎರಡೂ ಮನೆಯಲ್ಲಿ ನಮ್ಮ ಮದುವೆಗೆ ಒಪ್ಪಿಕೊಂಡಿದ್ದಾರೆ. ಮುಂದಿನ ತಿಂಗಳು ಮೂವತ್ತಕ್ಕೆ ನಮ್ಮ ಮದುವೆ, ಎಲಿಫೆಂಟಾ ಕೇವ್ಸಲ್ಲಿ. ನಿಮ್ಮ ಮೊಮ್ಮಗನ ಬಯಕೆ ಖಂಡಿತವಾಗಿಯೂ ಈಡೇರುತ್ತದೆ. ಆಮೇಲೆ ಬಂದು ನನಗೆ ಮತ್ತೊಮ್ಮೆ ಥ್ಯಾಂಕ್ಸ್ ಹೇಳುತ್ತೀರ ನೋಡ್ತಿರಿ' ಎಂದು ನಗು ತೇಲಿಸಿದ್ದಳು.

ಮಫತ್ಲಾಲ್ ಗುನ್ನಾಲಾಲ್ ಸೀದಾ ವಿಕ್ರಂ